**ದಿ:28.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:-**ವಾದಿ ಪರ ಶ್ರೀ.**T.H.V.,** ವಕೀಲರಿಂದ:-

ನಾನು ಈ ದಾವೆಯಲ್ಲಿ ಸಲ್ಲಿಸಿರುವ ತಕರಾರಿನ ಬಗ್ಗೆ ನನಗೆ ಮಾಹಿತಿ ಇರುತ್ತದೆ . ನನ್ನ ತಕರಾರಿನಲ್ಲಿ ನಮ್ಮ ತಂದೆ ತಿಪ್ಪಯ್ಯ ಅವರಿಗೆ ದಿ: 16.01.1992 ರಲ್ಲಿ ದಾವಾ ಆಸ್ತಿ ಐಟಂ ನಂಬರ್ 2 ರಲ್ಲಿ 34 ಗುಂಟೆ ದಾನಪತ್ರದ ಮೂಲಕ ಬಂದಿರುವುದಾಗಿ ತಿಳಿಸಿರುತ್ತೇನೆ ಎಂದರೆ ಸರಿ. ಸದರಿ ದಾನಪತ್ರ ಆದಾಲಿನಿಂದಲೂ ನನಗೆ ಅದರ ಬಗ್ಗೆ ಮಾಹಿತಿ ಇರುತ್ತದೆ . ನಾನು 34 ಗುಂಟೆಗೆ ಸ್ವಾಧೀನ ಇರುತ್ತೇನೆ. ನಮ್ಮ ತಂದೆ ಈಗಲೂ ಜೀವಂತ ಇರುತ್ತಾರೆ . ದಿ: 16.01.1992 ರಲ್ಲಿ ದಾನಪತ್ರ ಆಗಿದೆ ಎಂದು ಹೇಳುವ ದಿನದಿಂದಲೂ ಇಲ್ಲಿಯವರೆಗೆ ಸದರಿ 34 ಗುಂಟೆಗೆ ಖಾತೆ /ಪಹಣಿ ಮಾಡಿಸಿಕೊಳ್ಳಲು ಪ್ರಯತ್ನ ಪಟ್ಟಿರುತ್ತೀರ ಎಂದರೆ ಸಾಕ್ಷಿ ಪ್ರಯತ್ನ ಪಟ್ಟಿರುತ್ತೇವೆ ಎಂದು ಹೇಳುತ್ತಾರೆ . ಸನ್ 1992 ರಲ್ಲಿ ವಾದಿ

1 ರವರ ಗಂಡ ತಿಮ್ಮಣ್ಣ ಅವರ ಹೆಸರಿಗೆ ದಾವಾ ಆಸ್ತಿ ಐಟಂ ನಂಬರ್ 2 ರ ಆಸ್ತಿಯು ಪಹಣಿ ಇತ್ತು ಎಂದರೆ ಸರಿ. ನಮ್ಮ ತಂದೆ ಹಾಗೂ ನಾವು ಸದರಿ ವಾದಿ ಗಂಡ ಅವರ ಹೆಸರಿಗೆ ಇರುವ ಪಹಣಿ ರದ್ದು ಪಡಿಸಿ ನಮ್ಮ ತಂದೆ ಹೆಸರಿಗೆ ಪಹಣಿ ಬದಲಾವಣೆ ಮಾಡಲು ಕಂದಾಯ ಇಲಾಖೆಯಲ್ಲಿ ಅರ್ಜಿ ನೀಡಿರುತ್ತೀರ ಎಂದರೆ ಸಾಕ್ಷಿ ನಮ್ಮ ತಂದೆ ಅರ್ಜಿ ಕೊಟ್ಟಿರಬಹುದು ಎಂದು ಹೇಳುತ್ತಾರೆ . ಆ ರೀತಿ ಅರ್ಜಿಯನ್ನು ನೀಡಿರುವ ಬಗ್ಗೆ ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ . ಈ ದಾವೆ ಸಲ್ಲಿಸಿದ ನಂತರ ಕೂಡ ನಾವು ಪಹಣಿ ಬದಲಾವಣೆಗೆ ಅರ್ಜಿ ನೀಡಿರುತ್ತೀರ ಎಂದರೆ ಸಾಕ್ಷಿ ನಮ್ಮ ತಂದೆಗೆ ತಿಳಿದಿರುತ್ತದೆ ಎಂದು ಹೇಳುತ್ತಾರೆ . ಈ ನ್ಯಾಯಾಲಯಕ್ಕೆ ಸಲ್ಲಿಸಿರುವ ತಕರಾರಿಗೆ ನಾನೇ ಖುದ್ದು ಮಾಹಿತಿ ನೀಡಿರುತ್ತೇನೆ . ನಾವು ಸದರಿ 34 ಗುಂಟೆ ನಮಗೆ ಸೇರಬೇಕು ಎಂದು ಘೋಷಣೆ ಕೇಳಿ ತಕರಾರಿನಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ವಾದಿಗಳು ಸನ್ 1971 ನೊಂದಾಯಿತ ದಾನ ಪತ್ರ ಆದಾಗಿನಿಂದಲೂ ವಾದಿಗಳೇ ದಾವಾ ಆಸ್ತಿಯಲ್ಲಿ ಸ್ವಾಧೀನ ಅನುಭವ ಇರುತ್ತಾರೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಗೆ ಸಂಬಂದಿಸಿದ ಎಲ್ಲಾ ಕಂದಾಯ ದಾಖಲೆಗಳು ವಾದಿಯ ಹೆಸರಿಗೆ ಇರುತ್ತದೆ ಹೊರತು ನಮ್ಮ ಹೆಸರಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿಗೆ ಸೇರಬೇಕಾದ ಆಸ್ತಿಗಳು ಇರುತ್ತವೆ , ನಮಗೆ ಸೇರಬೇಕಾದ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ 2 ಪೋಟೋಗಳನ್ನು ತೋರಿಸಲಾಗಿ ಸದರಿ ಪೋಟೋಗಳಲ್ಲಿ ಇರುವ ವ್ಯಕ್ತಿ ತಾನು ಇರುವುದಾಗಿ ಒಪ್ಪಿಕೊಂಡಿದ್ದು, ಸಾಕ್ಷಿ ಒಪ್ಪಿದ 2 ಪೋಟೋಗಳನ್ನು ಕ್ರಮವಾಗಿ ನಿಪಿ 11 ಮತ್ತು 12 ಎಂದು ಗುರುತಿಸಲಾಯಿತು. ನಿಪಿ 11 ಮತ್ತು 12 ಪೋಟೋಗಳಲ್ಲಿ ಕಾಣುವ ಜಮೀನು ದಾವಾ ಆಸ್ತಿ ಐಟಂ ನಂಬರ್ 2 ರ ಜಮೀನು ಇರುತ್ತದೆ ಎಂದರೆ ಸರಿ.

ಈಗ ಸಾಕ್ಷಿಗೆ ಪೋಟೋ ತೋರಿಸಲಾಗಿ ಸದರಿ ಪೋಟೋದಲ್ಲಿ ಇರುವ ವ್ಯಕ್ತಿ ವಾದಿ 1 ರವರ ಅಳಿಯ ತಿಪ್ಪೇಸ್ವಾಮಿ ಇರುತ್ತಾರೆ ಎಂದು ಸೂಚಿಸಿದಾಗ ಸಾಕ್ಷಿ ಒಪ್ಪಿಕೊಂಡಿದ್ದು, ಸಾಕ್ಷಿ ಒಪ್ಪಿದ ಪೋಟೋವನ್ನು ನಿಪಿ 13 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪೋಟೋ ತೋರಿಸಲಾಗಿ ಸದರಿ ಪೋಟೋ ನಾವು ದಾವಾ ಆಸ್ತಿಯಲ್ಲಿ ಜಗಳ ವಾಡುತ್ತಿದ್ದಾಗ ತಗೆದ ಎಂದು ಸೂಚಿಸಿದಾಗ ಸಾಕ್ಷಿ ಒಪ್ಪಿಕೊಂಡಿದ್ದು, ಸಾಕ್ಷಿ ಒಪ್ಪಿದ ಪೋಟೋವನ್ನು ನಿಪಿ 14 ಎಂದು ಗುರುತಿಸಲಾಯಿತು. ನಿಪಿ

13 ರಲ್ಲಿ ನನ್ನ ತಮ್ಮ ಹಲ್ಲೇ ಮಾಡಿದ ಕಾರಣ ರಕ್ತಗಾಯ ಆಗಿರುತ್ತದೆ ಎಂದರೆ ಸರಿ. ಸದರಿ ಗಲಾಟೆ ಆದ ನಂತರ ವಾದಿಗಳು ಜಗಳೂರು ಪೋಲೀಸ್ ಠಾಣೆಯಲ್ಲಿದೂರನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ದೂರು ಗುನ್ಹೆ ಸಂಖ್ಯೆ 100/2021 ರಲ್ಲಿ ಪ್ರ.ವ.ವರದಿ ಎಂದು ದಾಖಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಈಗ ದೃಡೀಕೃತ ಗುನ್ಹೆ ಸಂಖ್ಯೆ 100/2021 ರ ಪ್ರ.ವ.ವರದಿ ತೋರಿಸಲಾಗಿ , ಸಾಕ್ಷಿ ಒಪ್ಪಿದ ಮೇರೆಗೆ ಸದರಿ ದಾಖಲೆಯನ್ನು ನಿಪಿ 15 ಎಂದು ಗುರುತಿಸಲಾಯಿತು. ಸನ್ 1971 ರಿಂದಲೂ ವಾದಿಗಳು ದಾವಾ ಆಸ್ತಿಗಳಲ್ಲಿ ಸ್ವಾಧೀನ ಇದ್ದು ನಾವು ಅವರ ಸ್ವಾಧೀನಕ್ಕೆ ಅಡ್ಡಿಪಡಿಸಿದ ಕಾರಣ ಅವರು ನಮ್ಮ ವಿರುದ್ದ ದೂರು ನೀಡಿ ನಂತರ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಪದೇ ಪದೇ ವಾದಿಗಳು ದಾವಾ ಆಸ್ತಿ ಸ್ವಾಧೀನಕ್ಕೆ ಅಡ್ಡಿಪಡಿಸಿದ ಕಾರಣ ವಾದಿಗಳು ಪೋಲೀಸ್ ಠಾಣೆಗೆ ದೂರನ್ನು ನೀಡಿ ಪ್ರ.ವ.ವರದಿ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಅಧಿಕಾರ ಇಲ್ಲದೇ ಇದ್ದರೂ ಸಹ ವಾದಿಗಳಿಗೆ ಸೇರಬೇಕಾದ ಆಸ್ತಿಯನ್ನು ಪಡೆಯಲು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು